ಹಾಕಿ, ಎಲುಬನ್ನು ಮಾತ್ರ ಉಳಿಸಿಬಿಡ್ತಾವೆ. ಇದನ್ನು ಕಂಡಮೇಲೆ, ನಾನು ಯಾತಕ್ಕೆ ಶಿಲ್ಪ ಮಾಡೋಕೆ ಹುಳಗಳಿಂದ ಸಹಾಯ ಪಡೀಬಾರದು ಅಂದುಕೊಂಡೆ. ನಮ್ಮ ಊರಕಡೆ 'ಉರು' ಅಂತ ಮರದ ವಿಗ್ರಹಗಳನ್ನು ಸಮುದ್ರಕ್ಕೆ ಬಿಸಾಡ್ತಾರೆ. ಅವುಗಳಲ್ಲಿ ಒಂದು ಶಿಲ್ಪ ತೆಕ್ಕೊಂಡು ಬಂದು ನೋಡುವಾಗ ಕಾಲಿನ ಬುಡದಲ್ಲಿ ಗೆದ್ದಲು ಹಿಡಿದಿತ್ತು. ಆಗ ಕಂಟ್ರೋಲ್ಡ್ ಗೆದ್ದಲನ್ನು ಹೇಗೆ ಇಳಿಸಬಹುದು ಅನ್ನುವಂತಹ ಆಲೋಚನೆ ಬಂತು. ಲೋಕಲ್ ಕಾರ್ಪೆಂಟರ್ ಹತ್ರ ಒಂದು ಶಿಲ್ಪ ಮಾಡಿಸಿ ಹಿಂಬದಿಯಲ್ಲಿ ಇಟ್ಟೆ. ಹದಿನೈದು ದಿನದಲ್ಲೇ ಗೆದ್ದಲು ಹಿಡಿಯಿತು. ಅದಕ್ಕೆ ಗೆದ್ದಲುನಾಶಕ ಒಂದೊಂದು ಕಡೆಯಲ್ಲಿ ಹಚ್ಚತಾ ಇದ್ದೆ. ಎಲ್ಲೆಲ್ಲಿ ಅದನ್ನು ಹಚ್ಚುತ್ತೇವೊ ಅಲ್ಲಿ ಗೆದ್ದಲು ತಿನ್ನಲ್ಲ. ಈ ವಿಧಾನ ಬಳಸಿ ಒಂದು ಕಲಾಕೃತಿ ರಚಿಸಿದೆ. ಇದರಲ್ಲಿ ಗೆದ್ದಲು ಹುಳಕ್ಕೆ ಇರುವ ವ್ಯಾಖ್ಯಾನ ಮತ್ತೆ ಟೆಕ್ಸ್ಟ – ಇವೆಲ್ಲಾ ಕಂಪ್ಲೀಟ್ ಆಗಿ ಒಂದು ಸ್ಪಷ್ಟವಾದ ಸ್ಟೇಟ್‌ಮೆಂಟ್ ಕೊಡ್ತಾ ಇದೆ ಅನ್ನಿಸಿತು. ಕಲಾಕೃತಿಯನ್ನ ರಚಿಸುವ ಮಾಧ್ಯಮ, ಕಲಾಕೃತಿಯ ಕಂಟೆಂಟ್ ಎಲ್ಲವೂ ಒಟ್ಟಿಗೆ ಸೇರಿ ಒಂದು ಸ್ಟೇಟ್‌ಮೆಂಟ್ ಮಾಡಬೇಕು. ಆಗ ವರ್ಕ್ ಒಂದು ತರಹ ಕಂಪ್ಲೀಟ್ ಅನ್ನಿಸುತ್ತದೆ.

◆ **ಈ ಉಜ್ಜಿ ತೆಗೆಯುವ ಇರೇಸಿಂಗ್ ಆಶಯ ನಿಮ್ಮ 'ಅಲ್ಜಮೈರ್' ಮತ್ತು 'ಅಪೊಕಲೀಪ್ಸ್' ಕಲಾಕೃತಿಗಳಲ್ಲೂ ಇದೆ. ಒಂದು – ನೈಸರ್ಗಿಕ ನಾಶ. ತನ್ನ ಆಹಾರವೆಂದು ಗೆದ್ದಲು ಮರವನ್ನು ತಿಂದು ಇಲ್ಲವಾಗಿಸುವುದು. ಪ್ರಕೃತಿಯೇ ವಸ್ತುವಿನ ಮೂಲರೂಪವನ್ನು ಬದಲಿಸಿ ಇನ್ನೊಂದು ರೂಪಕ್ಕೆ ತರೋದು. ಎರಡು – ಅಧಿಕಾರ ಮತ್ತು ಸಿದ್ಧಾಂತಗಳು, ಒಂದು ಸಮುದಾಯದ ನಂಬಿಕೆ ಗುರುತುಗಳನ್ನ ಯೋಜನಾಬದ್ಧವಾಗಿ ಇರೇಸ್ ಮಾಡುವುದು.**

ಇರೇಸಿಂಗ್ ಕಲ್ಪನೆ ಅವರವರ ವ್ಯಾಖ್ಯಾನಕ್ಕೆ ಬಿಟ್ಟಿದ್ದು. ಇದನ್ನ ಹಳೇದನ್ನು ಫಳಫಳ ಹೊಳೆಯೊ ಹಂಗೆ ಮಾಡೋ ಪಾಲಿಶಿಂಗ್ ಅಂತಾನೂ ಕರೀಬಹುದು. 'ಅಪೊಕಲೀಪ್ಸ್' ಕಲಾಕೃತಿಯಲ್ಲಿರೋ ಹಾಗೆ, ಜಾಸ್ತಿ ಪಾಲಿಶ್ ಆಗಿದೆ. ಅಲ್ಲಿ ನಾಣ್ಯದ ಮೇಲಿರೊ ಡಿನಾಮಿನೇಶನ್ನೇ ಉಜ್ಜಿಹೋಗಿದೆ. ಆರ್ಥಿಕ



ಕಂಚಿನ ಕಲಾಕೃತಿ 'ಇರೇಸರ್‌ಪ್ರೊ'

ದೃಷ್ಟಿಯಿಂದ ಮೌಲ್ಯ ಕಳೆದುಹೋಗುತ್ತೆ. ನಮ್ಮಜ್ಜನ ಹತ್ರ ನಲವತ್ತು ವರುಷದ ಹಿಂದಿನ ಚೂರಿ ಇತ್ತು. ಅವರು ಹೇಳ್ತಾ ಇದ್ರು 'ಈ ಚೂರಿ ಎಷ್ಟು ಉದ್ದ ಇತ್ತು, ಈಗ ಇಷ್ಟು ಸಣ್ಣದಾಗಿದೆ' ಅಂತ. ಅದನ್ನ ಅವರು ಅಷ್ಟು ವರುಷ ಶಾರ್ಪ್ ಮಾಡಿ ಮಾಡಿ ಆ ಸ್ಥಿತಿಗೆ ತಂದಿದ್ದರು. ನಾವು ಅಂದುಕೊಂಡಿರ್ತೇವೆ, ಶಾರ್ಪ್ ಮಾಡ್ತಾ ಇದ್ದೇವೆ ಅಂತ. ಅದು ಅದೃಶ್ಯ ಕೂಡ ಆಗ್ತಾ ಇದೆ. ನಾನು ಗಾಂಧಿಯ ರೆಡಿಮೇಡ್ ಶಿಲ್ಪ ತೆಕ್ಕೊಂಡಿದ್ದೆ – ಮಾರ್ಕೆಟ್‌ನಲ್ಲಿ. ನೋಡಿದರೆ ವಾಕರಿಕೆ ಬರುತಿತ್ತು. ಯಾಕಂದರೆ, ಅದು ಮಾರ್ಕೆಟ್‌ಗಾಗಿ ಮಾಡಿದ ಶಿಲ್ಪ. ಆದರೆ, ಅದು ಒಂದು ಮಗ್ಗುಲಿಂದ ಗಾಂಧಿಯ